ಸೆಲೆಬ್ರಿಟಿ

■ ಹನಿ

# ಅಮೆರಿಕಾದಲ್ಲಿ ತುಳಸಿ

ಅಮೆರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಹವಾಯ್‌ನ ಎರಡನೇ ಕ್ಷೇತ್ರದಿಂದ ಸ್ಪರ್ಧಿಸಿದ 'ಅಮೆರಿಕನ್ ಹಿಂದೂ' ಮಹಿಳೆ ತುಳಸಿ ಗಬ್ಬಾರ್ಡ್ ಭರ್ಜರಿ ಜಯ ಗಳಿಸಿದ್ದಾರೆ. ರಿಪಬ್ಲಿಕನ್ ಪಕ್ಷದ ಕವಿಕಾ ಕ್ರೌಲೀಯನ್ನು ಸೋಲಿಸುವ ಮೂಲಕ, ಡೆಮಾಕ್ರಾಟ್ ಪಕ್ಷದ ತುಳಸಿ ಹೊಸ ದಾಖಲೆಯೊಂದನ್ನು ಬರೆದಿದ್ದಾರೆ. ಈ ಮೂಲಕ ಇದೇ ಮೊದಲ ಬಾರಿಗೆ ಅಮೆರಿಕದ ಕಾಂಗ್ರೆಸ್‌ಗೆ ಹಿಂದೂ ಮಹಿಳೆಯೊಬ್ಬರು ಪ್ರವೇಶಿಸಿದಂತಾಗಿದೆ. 31ರ ಹರೆಯದ ತುಳಸಿ (ಬರ್ತ್‌ಡೇ 12/4/1981) ಹೌಸ್‌ನಲ್ಲಿ ಭಗವದ್ಗೀತೆಯನ್ನು ಸಾಕ್ಷಿಯಾಗಿಸಿ ಪ್ರಮಾಣ ಸ್ವೀಕರಿಸುವುದಾಗಿ ಹೇಳಿರುವುದು ದೊಡ್ಡ ಚರ್ಚೆಗೆ ಕಾರಣವಾಗಿದೆ.

ಅಮೆರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ಗೆ ಈ ಸಲ ಒಟ್ಟು 76 ಮಹಿಳೆಯರು ಆಯ್ಕೆಯಾಗಿದ್ದಾರೆ. ಕ್ರಿಶ್ಚಿಯನ್ ಅಲ್ಲದವರು ಹೌಸ್‌ಗೆ ಆಯ್ಕೆಯಾಗುವುದು ಕಷ್ಟ ಎನ್ನುವ ವಾತಾವರಣ ಅಲ್ಲಿತ್ತು. ಆದರೆ ತುಳಸಿ ಗೆದ್ದಿದ್ದಾರೆ. ಜತೆಗೆ ಇದೇ ಮೊದಲ ಬಾರಿಗೆ ಬೌದ್ಧ ಧರ್ಮೀಯ ಮಾಝಿ ಹಿರೋನೊ ಎಂಬವರೂ ಗೆಲುವು ಸಾಧಿಸಿದ್ದಾರೆ.

ಈ ಹಿಂದೆ ಹಿಂದೂ ಮೂಲದ ಬಾಬ್ಬಿ ಜಿಂದಾಲ್ ಲೂಸಿಯಾನಾ ಗವರ್ನರ್ ಆಗಿದ್ದರು. ತನ್ನ ತಂದೆಯ ಇಚ್ಛೆಗೆ ವಿರುದ್ಧವಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿದ್ದ ಬಾಬ್ಬಿ ತನ್ನ ಹಿಂದೂ ಮೂಲದ ಬಗ್ಗೆ ಮಾತನಾಡಲು ಬಯಸುತ್ತಿರಲಿಲ್ಲ. ಹಾಗೆಯೇ ದಕ್ಷಿಣ ಕೆರೊಲಿನಾದ ಗವರ್ನರ್ ಆಗಿದ್ದ ನಿಕ್ಕಿ ಹ್ಯಾಲಿ ಎಂಬ ಸಿಖ್ ಮಹಿಳೆ ಕೂಡಾ ಮೊದಲೇ ಕ್ಯಾಥೊಲಿಕ್ ಧರ್ಮಕ್ಕೆ ಮತಾಂತರ ಹೊಂದಿದ್ದರು. ಆದರೆ ತುಳಸಿ ಮಾತ್ರ ಯಾವ ಭಿಡೆಯೂ ಇಲ್ಲದೆ, 'ನಾನೊಬ್ಬ ಅಮೆರಿಕನ್ ಹಿಂದೂ. ನನ್ನ ಧರ್ಮದ ಬಗ್ಗೆ ನನಗೆ ಹೆಮ್ಮೆ ಇದೆ' ಎಂದು ಗಟ್ಟಿಧ್ವನಿಯಲ್ಲಿ ಹೇಳಿಯೂ ಚುನಾವಣೆಯಲ್ಲಿ ಜಯ ಗಳಿಸಿದ್ದಾರೆ. ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿದ ಮಸೂದೆಯನ್ನೂ ಗಟ್ಟಿ ಧ್ವನಿಯಲ್ಲಿ ಬೆಂಬಲಿಸಿದ್ದಾರೆ. ಅದನ್ನು ಪ್ರಶ್ನಿಸಿದ ವಿರೋಧಿಗಳಿಗೆ, 'ಇರಾಕ್ ಯುದ್ಧದ ಸಮಯದಲ್ಲಿ ಅಮೆರಿಕದ ಸೈನ್ಯ ಸೇರಿ ನಾನು ಹೋರಾಡಿದಾಗ ಇವರಿಗೆ ನನ್ನ ಧರ್ಮ ನೆನಪಾಗಲಿಲ್ಲ. ಈಗೇಕೆ ನನ್ನ ಧರ್ಮವನ್ನು ಎತ್ತಿ ತೋರಿಸುತ್ತಾರೆ?' ಎಂಬ ಖಡಕ್ ಪ್ರಶ್ನೆ ಎಸೆದಿದ್ದಾರೆ.

ಅಮೆರಿಕದಲ್ಲಿ 20 ಲಕ್ಷ ಹಿಂದೂಗಳಿದ್ದಾರೆ ಎನ್ನುವುದು ಒಂದು ಅಂದಾಜು. ತುಳಸಿಯ ತಂದೆ ಹವಾಯ್‌ನ ಸೆನೆಟರ್ ಆಗಿದ್ದ ಮೈಕ್ ಗಬ್ಬಾರ್ಡ್ ಕಟ್ಟಾ ಕ್ಯಾಥೊಲಿಕ್. ಕಕಾಶಿಯನ್ ಪಂಥಕ್ಕೆ ಸೇರಿದ ತಾಯಿ ಕ್ಯಾರಲ್ ಪೋರ್ಟರ್ ಹರೆಯದಲ್ಲಿ ಹಿಂದೂ ಧರ್ಮಕ್ಕೆ ಮತಾಂತರ ಹೊಂದಿದವಳು. ಈ ಸಲ ಚುನಾವಣೆಯಲ್ಲಿ ಸ್ಪರ್ಧಿಸಿದ ಇತರ ಐವರು ಭಾರತೀಯ ಮೂಲದವರೂ ಸೋತಿದ್ದಾರೆ. ತುಳಸಿಯ ಗೆಲುವಿನ ಹಿಂದೆ, ಹೊನಲುಲು ಸಿಟಿ ಕೌನ್ಸಿಲ್ ಸದಸ್ಯೆಯಾಗಿ, ರಾಜ್ಯದ ಅಸೆಂಬ್ಲಿ (ರೆಪ್) ಸದಸ್ಯೆಯಾಗಿ ದುಡಿದ ಅನುಭವವೂ ಕೆಲಸ ಮಾಡಿದೆ. ಸದ್ಯಕ್ಕೆ ಈಕೆ ಹವಾಯಿಯ ಆರ್ಮಿ ನ್ಯಾಷನಲ್ ಗಾರ್ಡ್‌ನ ಕಂಪೆನಿ ಕಮಾಂಡರ್. ಹೆಲ್ದೀ ಹವಾಯ್ ಕೋಅಲಿಷನ್ ಎಂಬ ಎನ್‌ಜಿಓ ಕೂಡಾ ನಡೆಸುತ್ತಿದ್ದಾರೆ. ಭಾರತ–ಅಮೆರಿಕ ಬಾಂಧವ್ಯ ವೃದ್ಧಿಗೆ ತುಳಸಿಯ ಆಯ್ಕೆ ಹೊಸ ಹುಮ್ಮಸ್ಸು ಮೂಡಿಸುವುದು ಖಂಡಿತ.





## 'ಆ್ಯಂಟಿ ವೈರಸ್' ಗುರು

ಮೆಕೆಫೀ ಅಸೋಸಿಯೇಟ್ಸ್‌ನ ಸ್ಥಾಪಕ, ಜಗತ್ತಿನಾದ್ಯಂತ ಸಾಫ್ಟ್‌ವೇರ್ ಎಂಜಿನಿಯರ್‌ಗಳಿಂದ 'ಆ್ಯಂಟಿ ವೈರಸ್ ಗುರು' ಎಂದೇ ಕರೆಯಲ್ಪಡುವ ಜಾನ್ ಮೆಕೆಫೀ ಸದ್ಯ ಸಂಕಷ್ಟದಲ್ಲಿದ್ದಾನೆ. 67 ವರ್ಷ ವಯಸ್ಸಿನ ಜಾನ್ ಮೆಕೆಫೀ (ಬರ್ತ್‌ಡೇ 18/9/1945) ಕೋಟ್ಯಧೀಶರೇ ವಾಸಿಸುತ್ತಿರುವ ಬೆಲೈಜ್ ದ್ವೀಪದಲ್ಲಿರುವ ತನ್ನ ವಿಶಾಲ ಬಂಗಲೆಯಲ್ಲಿ ಬಚ್ಚಿಟ್ಟುಕೊಂಡಿದ್ದಾನೆ! 'ಪೊಲೀಸರು ನನ್ನನ್ನು ಬಂಧಿಸಿ ಕೊಂದು ಬಿಡುತ್ತಾರೆ' ಎನ್ನುವುದು ಈತನ ಆತಂಕ. 'ದಯವಿಟ್ಟು ಪೊಲೀಸರ ಭೇಟಿಗೆ ಅವಕಾಶ ಕೊಡಿ. ಕೊಲೆಯೊಂದಕ್ಕೆ ಸಂಬಂಧಿಸಿ ಅವರು ಪ್ರಶ್ನೆ ಕೇಳುತ್ತಾರೆ ಅಷ್ಟೆ' ಎಂದು ಬೆಲೈಜ್ ದ್ವೀಪದ ಪ್ರಧಾನಿಯೇ ಸ್ವತಃ ಮನವಿ ಮಾಡಿದರೂ ಮೆಕೆಫೀ ಹೊರಗೆ ಬರುತ್ತಿಲ್ಲ!

ಈ ಅಮೆರಿಕನ್ ಕಂಪ್ಯೂಟರ್ ಪ್ರೋಗ್ರಾಮರ್ ತಾನು ರೂಪಿಸಿದ ಆ್ಯಂಟಿ ವೈರಸ್ ಸಾಫ್ಟ್‌ವೇರ್‌ನಿಂದಾಗಿ ಒಮ್ಮಿಂದೊಮ್ಮೆಲೆ ಕೋಟ್ಯಧೀಶನಾದವ. 2008ರಲ್ಲಿ ಈತನ ಸಂಪತ್ತಿನ ಮೌಲ್ಯ 100 ದಶಲಕ್ಷ ಡಾಲರ್‌ಗೆ ಏರಿತ್ತು! 2009ರಲ್ಲಿ ಅಮೆರಿಕದ ಆರ್ಥಿಕತೆ ಕುಸಿದಾಗ ಸಂಪತ್ತೂ 4 ದಶಲಕ್ಷ ಡಾಲರ್‌ಗೆ ಕುಸಿಯಿತಂತೆ. ಹಾಗೆಂದು ಸುಮ್ಮನಿರಲಿಲ್ಲ. 2010ರಲ್ಲಿ ಬ್ಯಾಕ್ಟೀರಿಯಾ ಕೋರಂ ಸೆನ್ಸಿಂಗ್ ತಂತ್ರಜ್ಞಾನದ ಕಂಪೆನಿ 'ಕೋರಂ ಎಕ್ಸ್' ಅನ್ನು ಹುಟ್ಟು ಹಾಕಿದ. ನೈಸರ್ಗಿಕ ಆ್ಯಂಟಿ ಬಯಾಟಿಕ್ಸ್ ತಯಾರಿಸಿ ಮತ್ತಷ್ಟು ಸಂಪತ್ತು ಸೇರಿಸಿದ. ಜತೆಗೆ ಯೋಗ ಕಲಿಸಿದ, ಯೋಗದ ಬಗ್ಗೆ ಪುಸ್ತಕ ಬರೆದ. ಒಟ್ಟಾರೆ ಸದಾ ಸುದ್ದಿಯಲ್ಲಿದ್ದ.

ಈಗ ಈತನ ಪಕ್ಕದ ಮನೆಯ ಗ್ರೆಗರಿ ಫಾಲ್ ಎಂಬಾತ ಕೊಲೆಯಾಗಿದ್ದಾನೆ. ಈ ಕೊಲೆಯಲ್ಲಿ ಮೆಕೆಫೀ ಕೈವಾಡ ಇದೆ ಎನ್ನುವುದು ಪೊಲೀಸರ ಶಂಕೆ! 'ಈತನ ಬಂಗಲೆಯಲ್ಲಿ ಸುಂದರಿಯರು ಮತ್ತು ನಾಯಿಗಳ ದಂಡೇ ಇದೆ. ಅಕ್ರಮ ಶಸ್ತ್ರಾಸ್ತ್ರಗಳನ್ನು ಹೊಂದಿದ್ದಾನೆ. ಲೈಸೆನ್ಸ್ ಇಲ್ಲದೆ ಔಷಧಿ ತಯಾರಿಸುತ್ತಾನೆ' ಎನ್ನುವುದು ನೆರೆಹೊರೆಯವರ ಆರೋಪ. ಸಮುದ್ರ ಬದಿಯ ತನ್ನ ಬಂಗಲೆಯ ಸುತ್ತ ಯಾರನ್ನೂ ಬಿಟ್ಟುಕೊಳ್ಳದ ಮೆಕೆಫೀ, 'ನಾಯಿಗಳ ಬಗ್ಗೆ ಚಿಂತೆ ಬೇಡ; ಮನೆಯೊಡೆಯನ ಬಗ್ಗೆ ಎಚ್ಚರದಿಂದಿರಿ' ಎಂದು ಈಜುಕೊಳದ ಹೊರಗೆ ಬೋರ್ಡ್ ಹಾಕಿದ್ದಾನಂತೆ! ಒಂದು ಕಾಲದಲ್ಲಿ ಉದಾರಿಯಾಗಿ ದಾನ ಧರ್ಮ ಮಾಡುತ್ತಿದ್ದ ಮೆಕೆಫೀ, ಈಗ ಎಲ್ಲರ ಸಂಶಯಕ್ಕೆ ಗುರಿಯಾಗಿ ವಿಕ್ಷಿಪ್ತನಂತೆ ಕಾಲ ಕಳೆಯುತ್ತಿರುವುದು ನಿಜಕ್ಕೂ ಕುತೂಹಲದ ಸಂಗತಿ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65